## ದಾಟು ಸ್ವರ ಪ್ರಯೋಗ

ವೀಣೆ ಸಾರ್ವಭೌಮ ದೊರೆಸ್ವಾಮಿ ಅಯ್ಯಂಗಾರ್ ಅವರ ಪುತ್ರ ಡಿ. ಬಾಲಕೃಷ್ಣ ಅವರು ತಂದೆಯ ನುಡಿಸಾಣಿಕೆಯ ವೈಶಿಷ್ಟ್ಯವನ್ನು ವರ್ಣಿಸುವುದು ಹೀಗೆ... 'ನಮ್ಮ ತಂದೆಯವರು ಮೈಸೂರು ಶೈಲಿಯಲ್ಲಿ ವಾದ್ಯ ಸಂಗೀತ ನುಡಿಸುತ್ತಿದ್ದು, 'ವಾದ್ಯ ಧರ್ಮ'ವನ್ನು ಅನುಸರಿಸಿ ನುಡಿಸಬೇಕು ಎನ್ನುವುದನ್ನು ಮೊದಲ ಬಾರಿಗೆ ಚಾಲ್ತಿಗೆ ತಂದವರು. ಕಛೇರಿಗಳಲ್ಲಿ ವೀಣೆ ನುಡಿಸುವಾಗ ಅದು ಹಾಡುವ ತರ ಇರಬೇಕು ಎನ್ನುತ್ತಿದ್ದರು. ವೀಣೆಯ ನಾದ, ವಿನಿಕೆ, ರಾಗ, ತಾನಗಳಲ್ಲಿ ಅದರದ್ದೇ ಆದ ಸೌಂದರ್ಯ ಇರುತ್ತೆ, ಅದನ್ನು 'ಗಾಯಕಿ'ಯಲ್ಲಿ ಅಭಿವ್ಯಕ್ತಿಸಬೇಕು ಎಂಬುದನ್ನು ನುಡಿಸಾಣಿಕೆಯಲ್ಲಿ ತೋರಿಸುತ್ತಿದ್ದರು.

ಅವರ 'ದಾಟು ಸ್ವರ' ಪ್ರಯೋಗಗಳು ಸಮಯೋಚಿತವಾಗಿದ್ದವು. ಸುಪ್ರಸಿದ್ಧ ರಾಗಗಳಾದ ಕಮಾಜ್, ಕದನ ಕುತೂಹಲ, ಮೋಹನ, ಬಿಲಹರಿ, ಕಲ್ಯಾಣಿ ರಾಗಗಳಲ್ಲಿ ದಾಟುಸ್ವರಗಳನ್ನು ರಾಗ–ಭಾವಕ್ಕೆ ಕೊಂಚವೂ ಕುಂದುಂಟಾಗದಂತೆ ನುಡಿಸುತ್ತಿದ್ದುದು ವಿಶೇಷ ಅನುಭವ ಕೊಡುತ್ತಿತ್ತು. ಪರಂಪರಾಗತವಾಗಿರುವ ತ್ಯಾಗರಾಜರ ಕೀರ್ತನೆಗಳನ್ನು ನುಡಿಸುವಾಗ ಕಲ್ಪನಾಸ್ವರ (ಮನೋಧರ್ಮ ಸಂಗೀತ) ಗಳಿಗೆ ಹೆಚ್ಚಿನ ಒತ್ತಾಸೆ ಕೊಡುತ್ತಿದ್ದರು. ಇಲ್ಲಿ ಅವರ ದಾಟುಸ್ವರಗಳ ಪ್ರಯೋಗ ರಾಗದ ಸೌಂದರ್ಯ ಹೆಚ್ಚಿಸುತ್ತಿತ್ತು.



ವಾಗ್ಗೇಯಕಾರರಾದ ಮೈಸೂರು ವಾಸುದೇವಾಚಾರ್ಯ ಅವರೊಂದಿಗೆ

ಸ್ಮರಣಾರ್ಹ. ಒಡೆಯರ ಆಳ್ವಿಕೆ ಕೊನೆಗೊಳ್ಳುತ್ತಾ ಪ್ರಜಾಪ್ರಭುತ್ವ ಪ್ರಬಲಗೊಳ್ಳುತ್ತಿದ್ದ ಸಂಧಿಕಾಲ 1955. ಬೆಂಗಳೂರು ಆಕಾಶವಾಣಿ ನಿಲಯವು ಸ್ಥಾಪನೆಯಾಗಿತ್ತು. ಭಾರತ ಸರ್ಕಾರವು ವೀಣೆ ದೊರೆಸ್ವಾಮಿ ಅಯ್ಯಂಗಾರ್‌ರನ್ನು ಬೆಂಗಳೂರು ಆಕಾಶವಾಣಿಯಲ್ಲಿ 'ಸಂಗೀತ ನಿರ್ಮಾಪಕ' (ಮ್ಯೂಸಿಕ್ ಪ್ರೊಡ್ಯೂಸರ್) ಆಗಿ ಕಾರ್ಯನಿರ್ವಹಿಸುವಂತೆ ಆಹ್ವಾನಿಸಿದರು. ಆಗ ಅವರು ಈ ಉನ್ನತ ಹುದ್ದೆ ಅಲಂಕರಿಸಿದರು. ಮುಂದೆ, 1980 ರವರೆಗೂ ಸತತವಾಗಿ ಸೇವೆ ಸಲ್ಲಿಸಿ ಆಕಾಶವಾಣಿಯಿಂದ ನಿವೃತ್ತರಾದರು. ತನ್ನ ಸೇವಾವಧಿಯಲ್ಲಿ ಅನೇಕ ಸದಭಿರುಚಿಯ ಅತ್ಯುತ್ತಮ ಸಂಗೀತ ಕಾರ್ಯಕ್ರಮಗಳನ್ನು ರಚಿಸಿ, ನಿರ್ದೇಶಿಸಿ ಆಕಾಶವಾಣಿಯ ಸಂಗೀತ ಭಂಡಾರ ಸದಾಕಾಲ ಸಮೃದ್ಧವಾಗಿರುವಂತೆ ಮಾಡುವಲ್ಲಿ ಯಶಸ್ವಿಯಾದರು.

1969ರಲ್ಲಿ ಇರಾನ್‌ನಲ್ಲಿ ವಿಶ್ವ ಲಲಿತಕಲಾ ಸಮ್ಮೇಳನದಲ್ಲಿ ದೊರೆಸ್ವಾಮಿ ಅಯ್ಯಂಗಾರ್ ಅವರು ನೀಡಿದ ವೀಣಾ ವಾದನ ಕಛೇರಿ ದಾಖಲೆಯ ಭಾಷ್ಯ ಬರೆಯಿತು. ಪದ್ಮಭೂಷಣ, ಸಂಗೀತ ಕಲಾರತ್ನ, ಚೌಡಯ್ಯ ಪ್ರಶಸ್ತಿ ಲಭಿಸಿದೆ. ಪಿಟೀಲು ಚೌಡಯ್ಯ ಅವರ ಜತೆಗೆ ದೊರೆಸ್ವಾಮಿ ಅಯ್ಯಂಗಾರ್ ನಡೆಸಿದ ಪಿಟೀಲು–ವೀಣೆ ಜುಗಲ್‌ಬಂದಿ ಕಛೇರಿ ಮನೆಮಾತಾಗಿತ್ತು.

ವೀಣೆ ನುಡಿಸಾಣಿಕೆಯಲ್ಲಿ ಹೊಸ ಹೊಸ ತಂತ್ರಗಾರಿಕೆಗಳನ್ನು ಕಲಿತು ಅದನ್ನು ತಮ್ಮ



ಸಂಗೀತ ಕಲಾನಿಧಿ ಪ್ರಶಸ್ತಿ ಎಂ.ಎಸ್. ಸುಬ್ಬಲಕ್ಷ್ಮಿ ಅವರಿಂದ

### ಪ್ರಮುಖ ಪ್ರಶಸ್ತಿಗಳು

- ಮೈಸೂರು ವಿವಿ ವಜ್ರಮಹೋತ್ಸವ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ (1976)
- ಬೆಂಗಳೂರು ಗಾಯನಸಮಾಜ ನೀಡುವ ಸಂಗೀತ ಕಲಾರತ್ನ (1976)
- ಪದ್ಮಭೂಷಣ ಪ್ರಶಸ್ತಿ (1983)
- ಚೆನ್ನೈ ಮ್ಯೂಸಿಕ್ ಅಕಾಡೆಮಿಯ 'ಸಂಗೀತ ಕಲಾನಿಧಿ' ಪ್ರಶಸ್ತಿ (1984)
- ಸರೋದ್ ಮಾಂತ್ರಿಕ ಉಸ್ತಾದ್ ಅಲಿಖಾನ್ ಅವರು ತಮ್ಮ ತಂದೆಯವರ ಹೆಸರಿನಲ್ಲಿ ನೀಡುವ 'ಉಸ್ತಾದ್ ಹಫೀಜ್ ಅಲಿಖಾನ್' ಪ್ರಶಸ್ತಿ (1992)
- ಇಂಡಿಯನ್ ಫೈನ್ ಆರ್ಟ್ಸ್ ಸೊಸೈಟಿ ನೀಡುವ ಸಂಗೀತ ಶಿಖಾಮಣಿ ಪ್ರಶಸ್ತಿ (1994)

ಟಿ. ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ (1997)